

# ಶಾಸನ ಪರಿವೀಕ್ಷಣೆ


ಡಾ. ಎಂ.ಕೆ. ಮಂಜುನಾಥ


ಶಾಸನ ಪರಿವೀಕ್ಷಣೆ • ಡಾ. ಎಂ.ಕೆ. ಮಂಜುನಾಥ



ಪ್ರಾಚೀನ ಜನರ ಇತಿಹಾಸ, ಸಂಸ್ಕೃತಿಯನ್ನು ಅರಿಯಲು ಪ್ರಮುಖ ದಾಖಲೆಗಳಾದ ಶಾಸನಗಳು ಅಕ್ಷಯ ಸಾಮಗ್ರಿಗಳಿದ್ದಂತೆ. ಇವುಗಳಿಂದ ಮೊಗೆದಷ್ಟು ಲಭಿಸುವ ಮಾಹಿತಿಗಳು, ನಮ್ಮ ಪೂರ್ವಿಕರ ಇತಿಹಾಸವನ್ನು ಮತ್ತು ಸಂಸ್ಕೃತಿಯನ್ನು ಹಲವು ಮುಖಗಳಿಂದ ಪರಿಚಯಿಸುತ್ತವೆ. ಆ ಹಿನ್ನೆಲೆಯಿಂದ ಶಾಸನಗಳನ್ನು ಸಂಸ್ಕೃತಿವಾಹಕಗಳೆಂದೇ ಕರೆಯಬಹುದು. ಇಂದು ಇತಿಹಾಸದ ಪರಿಕಲ್ಪನೆ ಭಿನ್ನಸ್ತರದಲ್ಲಿ ಭಿನ್ನರೂಪಗಳಲ್ಲಿ ಬಹುಸ್ವರೂಪವನ್ನು ಪಡೆದಿದ್ದು, ಮುಂದೆಯೂ ಅದು ತಲೆಮಾರಿನಿಂದ ತಲೆಮಾರಿಗೆ ಬದಲಾಗುತ್ತಾ ಹೋಗುತ್ತದೆಂಬುದನ್ನು ಇಂದು ನಡೆಯುತ್ತಿರುವ ಇತಿಹಾಸದ ಪುನಾರಚನೆಯನ್ನು ಗಮನಿಸಿದರೆ ತಿಳಿದುಬರುತ್ತದೆ. ಶಾಸನಗಳ ಅವಲೋಕನವು ಒಂದೆಡೆ ಪ್ರಾಚೀನ ಜನರ ವೀರಗುಣವನ್ನು ಪರಿಚಯಿಸಿದರೆ, ಮತ್ತೊಂದೆಡೆ ಅಷ್ಟೇ ಪ್ರಮುಖವಾಗಿ ಅವರ ತ್ಯಾಗಗುಣವನ್ನು ಪರಿಚಯಿಸುತ್ತದೆ. ತಾವು ನಂಬಿದ ಧರ್ಮಕ್ಕಾಗಿ, ದೇವರಿಗಾಗಿ, ಪ್ರತ್ಯೇಕ್ಷ ದೈವವೆಂದು ತಿಳಿಯಲಾದ ಪತಿಗಾಗಿ, ಅನ್ನವನ್ನು ನೀಡಿದ ಧಣಿಗಾಗಿ ಪ್ರಾಣವನ್ನೇ ತ್ಯಾಗ ಮಾಡುವ ಮನೋಭಾವ ಶಾಸನಗಳಲ್ಲಿ ಅಭಿವ್ಯಕ್ತಗೊಂಡಿದೆ. ಇವುಗಳ ಪ್ರತೀಕವಾಗಿ ನಾಡಿನೆಲ್ಲೆಡೆ ವೀರಮರಣ, ಮಹಾಸತಿ ಆಚರಣೆ, ಜೈನರ ನಿಸಿದಿ ಆಚರಣೆ, ಜೋಳವಾಳಿ, ಗರುಡಪದ್ಧತಿ, ಲೆಂಕವಾಳಿ ಮತ್ತು ಸಿಡಿದಲೆ ಮೊದಲಾದವುಗಳ ಚಿತ್ರಣವನ್ನು ಬಿಂಬಿಸುವ ಸ್ಮಾರಕ ಶಿಲ್ಪಗಳಿರುವುದನ್ನು ಕಾಣಬಹುದು. ಹೀಗೆ ವಿವಿಧ ಬಗೆಯ ಸಂಸ್ಕೃತಿ, ಸಂಪ್ರದಾಯ, ಆಚರಣೆಗಳನ್ನು ತಿಳಿಸಿಕೊಡುವ ಶಾಸನಗಳನ್ನು ಪ್ರಮುಖ ಆಧಾರವಾಗಿಟ್ಟುಕೊಂಡು ಈ ಕೃತಿಯನ್ನು ರಚಿಸಲಾಗಿದ್ದು, ಹಲವು ಹೊಸಹೊಸ ಮಾಹಿತಿಗಳನ್ನು ತಿಳಿಸಿಕೊಡುತ್ತದೆ.


ಎಸ್.ಎಲ್.ಎನ್. ಪಬ್ಲಿಕೇಷನ್
ನಂ. 3437, 4ನೇ ಮುಖ್ಯ ರಸ್ತೆ, 9ನೇ ಅಡ್ಡರಸ್ತೆ, ಶಾಸ್ತ್ರೀನಗರ
ಬನಶಂಕರಿ 2ನೇ ಹಂತ, ಬೆಂಗಳೂರು-28
ಮೊ : 8105590908

ISBN: 978-93-85368-13-4